**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ: 09.12.2025 ರಂದು ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ವಾದಿ ಪರ ಶ್ರೀ ಹೆಚ್ ಎನ್ ಬಿ ಎನ್ ವಕೀಲರಿಂದ:**

ವಾದಿ ವಾಸ ಮಾಡುತ್ತಿರುವ ಮನೆಯನ್ನು 1969 ರಲ್ಲಿ ಅವರು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಂದರ್ಭದಲ್ಲಿ ವಾದಿಯು ನೀರಿನ ಸಂಪ್ ಅನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿಯಾಗಿ ವಾದಿ 1969 ರಲ್ಲಿ ದಾವಾ ಮನೆಯನ್ನು ಮತ್ತು ನೀರಿನ ಸಂಪ್ ಅನ್ನು ಕಟ್ಟಿರುವುದಿಲ್ಲ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ವಾದಿಯು ತನ್ನ ಮನೆಯನ್ನು ನವೀಕರಿಸಲು ಮತ್ತು ಸುಣ್ಣಬಣ್ಣ ಹಚ್ಚಲು ಪ್ರಾರಂಭಿಸಿದಾಗ ನಾನು ವಿನಾ ಕಾರಣ ವಾದಿಯ ದಾವಾ ಸ್ವತ್ತಿನ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ ಉಂಟುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಮಾಲಿಕತ್ವ ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸಾಕ್ಷಿಯು ವಾದಿಯು ಸರ್ಕಾರಿ ರಸ್ತೆಯನ್ನು ಅತಿಕ್ರಮಿಸಿ ನೀರಿನ ಸಂಪ್ ಅನ್ನು ಕಟ್ಟಿರುತ್ತಾರೆ ಮತ್ತು ನನ್ನ ಆಸ್ತಿಯ ಉತ್ತರ ಭಾಗದ 12 ಅಡಿಯನ್ನು ಅತಿಕ್ರಮಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ವಾದಿ ಅತಿಕ್ರಮಿಸಿಕೊಂಡಿರುವ ನನ್ನ 12 ಅಡಿ ಆಸ್ತಿಯನ್ನು ವಾದಿಯಿಂದ ಮರುಸ್ವಾಧೀನ ಪಡೆಯಲು ನಾನು ವಾದಿಯ ವಿರುದ್ಧ ಯಾವುದೇ ದಾವೆ ಹೂಡಿರುವುದಿಲ್ಲ. ವಾದಿಯು ನನ್ನ 12 ಅಡಿ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎನ್ನುವ ಸಂಗತಿಯನ್ನು ನಾನು ನನ್ನ ಪ್ರತಿವಾದಪತ್ರದಲ್ಲಿ ಹೇಳಿರುವುದಿಲ್ಲ ಇದೇ ಮೊದಲ ಬಾರಿ ನನ್ನ ಸಾಕ್ಷ್ಯ ವಿಚಾರಣೆಯಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ತನ್ನ ಸ್ವತ್ತಿನಲ್ಲೇ ನೀರಿನ ಸಂಪ್ ಅನ್ನು ಕಟ್ಟಿದ್ದರೂ ಕೂಡಾ ನಾನು ದುರುದ್ದೇಶದಿಂದ ವಾದಿಯ ವಿರುದ್ದ 1 ನೇ ಪ್ರತಿವಾದಿಗೆ ಮತ್ತು ಇತರೆ ಪ್ರಾಧಿಕಾರಗಳಿಗೆ ಸುಳ್ಳು ಅರ್ಜಿಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಚಿತಾವಣೆಯಿಂದ 1 ನೇ ಪ್ರತಿವಾದಿ ವಾದಿಗೆ ದಾವಾ ಆಸ್ತಿಯ ಸ್ವಾಧೀನಕ್ಕೆ ಅಡಚಣೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ಗೂಂಡಾ ಸಹಚರರೊಂದಿಗೆ ವಾದಿಯೊಂದಿಗೆ ಗಲಾಟೆ ಮಾಡಿ ವಾದಿಯ ನೀರಿನ ಸಂಪ್ ಅನ್ನು ನಾಶಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ .ಎಫ್ .ಸಿ ., ತಿ .ನರಸೀಪುರ**